(ಬಿ) 1997-98 - ರೂ.171-00
(2-1-98ರವರೆಗೆ)

3. 1996-97 - ರೂ.471-00

(ಇ) ಪ್ರಸಕ್ತ ಆರ್ಥಿಕ ವರ್ಷದಲ್ಲಿ (ಅಂದರೆ 2000-01)ಯೂ ಸಹ ಭಾಗ್ಯಜ್ಯೋತಿ ಯೋಜನೆಯಡಿಯ ವಿದ್ಯುದೀಕರಣಕ್ಕೆ ಪ್ರತಿ ಮನೆಗೆ ರೂ. 511-00ಕ್ಕೆ ಮಿಾರದಂತೆ ಹಣ ಪಾವತಿ ಮಾಡಲಾಗುತ್ತಿದೆ.

ಬೈಂದೂರು ಕ್ಷೇತ್ರಕ್ಕೆ ವಿದ್ಯುತ್ ಹ್ಯಾಮ್ಲೆಟ್ ಯೋಜನೆ ಬಗ್ಗೆ

1809 (2531) ಶ್ರೀ ಗೋಪಾಲ ಪೂಜಾರಿ. ಕೆ. (ಬೈಂದೂರು):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ವಿದ್ಯುತ್ ಹ್ಯಾಮ್ಲೆಟ್ ಯೋಜನೆಯಲ್ಲಿ ಬೈಂದೂರು ಕ್ಷೇತ್ರಕ್ಕೆ ಈವರೆವಿಗೆ ಎಷ್ಟು ಪ್ರಸ್ತಾವನೆ;

(ಆ) ಎಷ್ಟು ಗ್ರಾಮಗಳು ಈ ಯೋಜನೆ ಅನುಷ್ಠಾನಗೊಳ್ಳಲು ಬಾಕಿ ಉಳಿದಿದೆ;

(ಇ) ಇದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) ಬೈಂದೂರು ಕ್ಷೇತ್ರದಲ್ಲಿ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ಸಂಬಂಧಿಸಿದಂತೆ, 10 ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಮಂಜೂರಾತಿ ದೊರಕಿರುತ್ತದೆ.

(ಆ) ಮಂಜೂರಾತಿ ದೊರಕಿರುವ ಎಲ್ಲಾ 10 ಹ್ಯಾಮ್ಲೆಟ್‌ಗಳು ಈ ಯೋಜನೆಯ ಅನ್ವಯ ಅನುಷ್ಠಾನಕ್ಕಾಗಿ ಬಾಕಿ ಉಳಿದಿವೆ.

(ಇ) ಪ್ರಸಕ್ತ ವರ್ಷವಾದ 2000-2001ರಲ್ಲಿ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ತಾಲ್ಲೂಕುವಾರು ಗುರಿಗಳನ್ನು ನಿಗಧಿಪಡಿಸಿರಬೇಕಾಗುತ್ತದೆ. ಕುಂದಾಪುರ ತಾಲ್ಲೂಕಿಗೆ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕಾಗಿ ನಿಗದಿಪಡಿಸಲಾಗುವ ಗುರಿಗೆ ತಕ್ಕಂತೆ ವಿದ್ಯುದೀಕರಣ ಕಾರ್ಯವನ್ನು ಕೈಗೊಳ್ಳಲು ಕ್ರಮ ಜರುಗಿಸಲಾಗುವುದು.

ಬೀದರ್‌ನ ನೀರಾವರಿ ಇಲಾಖೆಯಲ್ಲಿ ನಡೆದಿರುವ ಅವ್ಯವಹಾರಗಳು

1810 (2291) ಶ್ರೀ ಗುಂಡಪ್ಪ ವಕೀಲ್ (ಔರಾದ್):

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?